ಶ್ರೀ ಯು. ಎಂ. ಮಾದಪ್ಪ.—ಕಮರಹಳ್ಳಿ ಮರಳ ವಾಡಿ ಅಣೆಕಟ್ಟಿನಿಂದ ಎಷ್ಟು ಪ್ರದೇಶ ಮುಳುಗಡೆ ಯಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ಪ್ರಶ್ನೆ ನಮ್ಮ ಮುಂದಿಲ್ಲ.

Chamakalahalli Tank near Nangli (Repairs).

Q.—370. Sri G. NARAYANA GOWDA (Mulbagal-Srinivasapur).—

Will the Government be pleased to state :—

(*a*) when the tank of Chamakalahalli near Nangli in Mulbagal Taluk was breached ;

(*b*) whether there were any representations from the villagers of Chamakalahalli for restoring the same ;

(*c*) the steps taken in this behalf ?

A.—Sri H. M. CHANNABASAPPA (Minister for Industries).—

(*a*) There is no tank by that name.
(*b*) and (*c*) Do not arise.

ಶ್ರೀ ಜಿ. ನಾರಾಯಣ ಗೌಡ.—ಚಮಕಲಹಳ್ಳಿ ಕೆರೆ ಒಡೆದುಹೋಗಿರುವುದು ನಿಜವೆ ?

*Sri H. M. CHANNABASAPPA.—There is a tank called Kengalakunte and that has breached.

ಶ್ರೀ ಜಿ. ನಾರಾಯಣ ಗೌಡ.—ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ದಿವಸಗಳ ಹಿಂದೆ.

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಜೀರ್ಣೋದ್ಧಾರ ಮಾಡಬೇಕೆಂದೇನಾದರೂ ಅರ್ಜಿಗಳು ಬಂದಿದ್ದವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ —1908ನೆಯ ಇಸವಿಯಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಿ ಕೆಲವು ಅಬ್ಯಾಂಡನ್ಡ್ ಟ್ಯಾಂಕ್ಸ್‌ಗಳ ಒಂದು ಪಟ್ಟಿಮಾಡಿತ್ತು. ಅದರಲ್ಲಿ ಕೆಂಗಲಕುಂಟೆ ಕೆರೆಯೂ ಸೇರಿದೆ.

ಶ್ರೀ ಜಿ. ನಾರಾಯಣ ಗೌಡ.—ಆ ಪ್ರಾಂತದಲ್ಲಿ ಬೇರೆ ಯಾವುದಾದರೂ ಕೆರೆಗಳಿವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಚಲ ಕೆರೆ, ಮಾಗಡಿ ಕುಂಟೆ ಕೆರೆ, ಕಲ್ಲೂರಿ ಕೆರೆ ಎಂದು ಮೂರು ಕೆರೆಗಳಿವೆ.

ಶ್ರೀ ಜಿ. ನಾರಾಯಣ ಗೌಡ.—ಈ ಮೂರು ಕೆರೆಗಳ ಆಚ್ಚುಕಟ್ಟಿನಲ್ಲಿ ಈಗ ಬೆಳೆಯಾಗುತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜ್ಞಾಪಕವಿಲ್ಲ. ಕೆಂಗಲಕುಂಟೆ ಕೆರೆಯ ತಪಶೀಲು ಬೇಕಾದರೆ ಹೇಳಬಹುದು.

ಶ್ರೀ ಜಿ. ನಾರಾಯಣ ಗೌಡ.—ನನಗೆ ಚಮಕಲ ಹಳ್ಳಿಗೆ ಸೇರಿದ ಮೂರು ಕೆರೆಗಳ ವಿಚಾರ ಮಾತ್ರ ಬೇಕು.

Sri H. M. CHANNABASAPPA.—I want notice for that.

ಶ್ರೀ ಜಿ. ನಾರಾಯಣ ಗೌಡ.—ಇದು ಪಾಲಾರ್ ಸೀರೀಸಿಗೆ ಸೇರಿದೆಯೇ ?

Sri H. M. CHANNABASAPPA.—Notice.

ಶ್ರೀ ಜಿ. ನಾರಾಯಣ ಗೌಡ.—ಈ ಮೂರು ಕೆರೆಗಳೂ ಜೀರ್ಣೋದ್ಧಾರವಾಗದೆ ರೈತರಿಗೆ ತೊಂದರೆಯಾಗಿದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲನ್ನು ಬೇಕಾದರೆ ಆಮೇಲೆ ಹೇಳುತ್ತೇನೆ; ಈಗ ಅದು ನನ್ನಲ್ಲಿಲ್ಲ.

Major tanks in Hosadurga Taluk.

Q.—472. Sri G. BASAPPA (Hosadurga).—

Will the Government be pleased to state :—

(*a*) the number of major tanks in in Hosadurga Taluk ;

(*b*) the number of major tanks restored during the First Five-Year Plan and the amount spent ;

(*c* the number of major tanks proposed to be restored during the Second Five-Year Plan ?

A.—Sri H. M. CHANNABASAPPA (Minister for Industries).—

(*a*) 19.

(*b*) No major tank was restored during this period.

(*c*) The restoration of five tanks is proposed to be taken up subject to allotment of funds.

ಶ್ರೀ ಜಿ. ಬಸಪ್ಪ.—ಹತ್ತೊಂಬತ್ತು ಕೆರೆಗಳ ಹೈಕಿ ಈ ಐದು ವರ್ಷದ ಅವಧಿಯಲ್ಲಿ ಎಷ್ಟು ಕೆರೆಗಳು ಒಡೆದಿವೆ ?

*Sri H. M. CHANNABASAPPA.—I have no information.

ಶ್ರೀ ಜಿ. ಬಸಪ್ಪ.—ಬಲ್ಲಾಳಸಮುದ್ರ ಕೆರೆ ಒಡೆದು ಹೋಗಿರುವುದು ಇನ್ನೂ ರಿಪೇರಿಯಾಗಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—The information is that there are 19 major tanks in that Taluk of which 14 are restored and are functioning ; 5 tanks are proposed for restoration.